ಬೇಕೆಂದು ಸಾಕಷ್ಟು ಹುಡುಕಿ ಕೃಷ್ಣವೇಣಿಯನ್ನು ಆರಿಸಿಕೊಂಡ.

ಪದೇ ಪದೇ ತಲೆ ಎತ್ತಿ ಇಳಿಸುವ ಮಗಳನ್ನು ಯಾರೂ ಮದುವೆ ಆಗುವುದಿಲ್ಲವೆಂದು ಗಾಬರಿಯಾದ ಅವಳ ಅಪ್ಪ, ಕೃಷ್ಣವೇಣಿಗಿಂತ ಹನ್ನೆರಡು ವರ್ಷ ದೊಡ್ಡವನಾದರೂ ಅಡ್ಡಿಯಿಲ್ಲವೆಂದು ಗಿರೀಶನಿಗೆ ಕೊಟ್ಟು ಮದುವೆ ಮಾಡಿದ.

ಕೃಷ್ಣವೇಣಿಯ ರೂಢಿಯನ್ನು ಮೊದಲ ದಿನವೇ ಗಮನಿಸಿದ ಅವಳ ಗಂಡ ಅವಳ ಕತ್ತು ಹಾಗೆ ಮೇಲೆ ಕೆಳಗೆ ಬರದ ಹಾಗೆ ಒಂದು ಲೆವೆಲ್‌ಗೆ ಹೇಗೆ 'ಫಿಕ್ಸ್' ಮಾಡುವುದೆಂದು ತುಂಬಾ ಯೋಚನೆ ಮಾಡಿದ. ಅವಳು ಮನೆಗೆ ಕಾಲಿಡುತ್ತಲೇ ದೊಡ್ಡದೊಂದು ಮೊಳೆ ತಂದು ಅವಳ ಕತ್ತಿನ ಹಿಂಭಾಗಕ್ಕೆ ಹೊಡೆದ. ಆಗ ಅವಳು ಅವನ ಪಾದವೂ ಅಲ್ಲದೇ, ಕಣ್ಣೂ ಅಲ್ಲದೇ ಅವನ ಬಾಯಿ, ಮೀಸೆ ಮಾತ್ರ ನೋಡುವ ಹಾಗೆ ಆದಳು. ಮೊಳೆ ಹೊಡಿಸಿಕೊಂಡು ನೋವಿನಿಂದ ಅಳತಾ ಕೂತಿದ್ದ ಹೆಂಡತಿಗೆ ಬಣ್ಣ ಬಣ್ಣದ ದಾರದ ಉಂಡೆಗಳೂ, ಒಂದು ಕ್ರೋಷಿಯಾ ಸೂಜಿ, ರಂಗೋಲಿ ಡಿಜೈನಿನ ಪುಸ್ತಕ ತಂದು ಕೊಟ್ಟ. ಚಿಕ್ಕದೊಂದು ರೇಡಿಯೋ ಕೂಡಾ ತಂದುಕೊಟ್ಟಿದ್ದ. ದಿಂಡಿನ ಕವರಿನ ಮೇಲೆ ಕಸೂತಿ ಮಾಡುತ್ತಾ, ಬಾಗಿಲಿಗೆ ತೆರೆ ಹೆಣೆಯುತ್ತಾ, ಧನುರ್ ಮಾಸದಲ್ಲಿ ಬಣ್ಣ ಬಣ್ಣದ ರಂಗೋಲಿ ಬಿಡಿಸುತ್ತಾ ಕೃಷ್ಣವೇಣಿ ನೋವು ಮರೆಯುತ್ತಿದ್ದಳು. ನೋವಂತೂ ಇದ್ದೇ ಇತ್ತು!

ಮಗಳು ಹುಟ್ಟಿದರೆ ಅವಳಿಗೂ ಈ ದುಷ್ಟ ಮೊಳೆ ಹೊಡೆಯಬಹುದಾ ಅನ್ನುವ ಯೋಚನೆಯೇ ಅವಳನ್ನು ನಡುಗಿಸುತ್ತಿತ್ತು. ಆತ ಆಫೀಸಿಗೆ ಹೋದ ನಂತರ ವಾರಪತ್ರಿಕೆ ಓದುವುದು, ರೇಡಿಯೋ ಸುದ್ದಿ ಕೇಳುವುದು ರೂಢಿಯಾಯಿತು. ದೇಶದ ಉದ್ದಗಲಕ್ಕೂ ನಡೆಯುವ ವಿಷಯಗಳು ಗೊತ್ತಾಗುತ್ತಿದ್ದವು. ಅದೊಂದು ದಿನ ಆತ ಹಬ್ಬಕ್ಕೆ ತಂದುಕೊಟ್ಟಿದ್ದ ಸಿಲ್ಕು ಸೀರೆ ಸುಟ್ಟು ಒದೆ ತಿಂದಿದ್ದಳು. ಇನ್ನೊಂದು ಸಲ ಮನೆ ಖರ್ಚಿಗೆ ಕೊಟ್ಟಿದ್ದ ಹಣ ಉಳಿಸಿ ಚರಕ ಖರೀದಿ ಮಾಡಿದ್ದಳು. ಮತ್ತೊಂದು ಸಲ ಅವಳ ಸೋದರತ್ತೆ ಗಾಂಧೀ ತಾತನಿಗೆ ಒಡವೆ ಕೊಡಲು ಹೋದಾಗ ತನ್ನ ಒಡವೆಯನ್ನೂ ಕೊಟ್ಟಳು. ಹಾಗೆ ಏಟು ತಿನ್ನುತ್ತಾ ಬೈಯ್ಯಿಸಿಕೊಳ್ಳುತ್ತಾ, ಕಸೂತಿ ಹಾಕುತ್ತಾ ಕಾಲ ಕಳೀತಾ



ಇದ್ದ ಕೃಷ್ಣವೇಣಿಗೆ ಮಗಳು ಹುಟ್ಟಿದಳು. ಮಗುವಿಗೆ ತನ್ನ ಅಮ್ಮನ ಹೆಸರಿಡಬೇಕೆಂದು ಗಿರೀಶ, ಇಲ್ಲ ಝಾನ್ಸಿಲಕ್ಷ್ಮಿ ಎಂಬ ಹೆಸರೇ ಬೇಕೆಂದು ಕೃಷ್ಣವೇಣಿ ಹಟ ಹಿಡಿದು, ಇಬ್ಬರಿಗೂ ಜಗಳವಾಗಿ ಕೊನೆಗೆ ಆತ ಅಮ್ಮನ ಹೆಸರಿನಿಂದ, ಈಕೆ ಝಾನ್ಸಿ ಹೆಸರಿನಿಂದ ಕರೆಯಲು ಶುರು ಮಾಡಿ, ಸ್ಕೂಲಿಗೆ ಸೇರಿಸಲು ಹೋದಾಗ ಆ ಹುಡುಗಿ ತನ್ನ ಹೆಸರು ಝಾನ್ಸಿ ಅಂದದ್ದು, ಹೆಡ್ ಮಾಸ್ತರು ಕೂಡಾ ಅದೇ ಹೆಸರು ಚೆನ್ನಾಗಿದೆ ಅಂದದ್ದು ಆಗಿ, ಝಾನ್ಸಿ ಹೆಸರು ಕಾಯಮ್ಮಾಯಿತು. ಕೃಷ್ಣವೇಣಿಗೆ ಇದು ತನ್ನ ಮೊದಲ ಗೆಲುವು ಅನಿಸಿತು. ಆಗಿನಿಂದ ಝಾನ್ಸಿಯನ್ನು ಸಾಕುವುದು ಕೃಷ್ಣವೇಣಿಗೆ ಸವಾಲಾಯಿತು. ಝಾನ್ಸಿಲಕ್ಷ್ಮಿ ಮಟ್ಟಸವಾಗಿ ಬೆಳೆಯುತ್ತಿದ್ದಳು. ತಂದೆ ಮಗಳು ಎದುರಾದಾಗ ಇಬ್ಬರ ನಡುವೆ ವಾದ ಬೆಳೆಯದ ಹಾಗೆ ನೋಡಿಕೊಳ್ಳುವುದು ಕೃಷ್ಣವೇಣಿಗೆ ತಂತಿಯ ಮೇಲಿನ ನಡಿಗೆಯೇ ಸರಿ.

ಅದೊಂದು ದಿನ ಸಂಜೆ ಕೃಷ್ಣವೇಣಿಯ ಊರಿನಿಂದ ರಾಂಬಾಬು ಹೆಸರಿನ ವ್ಯಕ್ತಿ ಒಬ್ಬ ಬಂದಿದ್ದ. ತುಂಬಾ ದಣಿದಿದ್ದ. ಅವನಿಗಾಗಿ ಪೊಲೀಸರು ಹುಡುಕುತ್ತಿದ್ದ ವಿಷಯ ತಿಳಿಸಿ ಆ ದಿನದ ಮಟ್ಟಿಗೆ ಆಶ್ರಯ ಕೊಡಬೇಕೆಂದು ಕೇಳಿಕೊಂಡ. ಆತ ಕಮ್ಯುನಿಸ್ಟ್ ಅನ್ನುವ ವಿಷಯ ಕೃಷ್ಣವೇಣಿಗೆ ಗೊತ್ತಿತ್ತು. ಕಮ್ಯುನಿಸ್ಟರೆಂದರೆ ಗಿರೀಶನಿಗೆ ಆಗುವುದಿಲ್ಲವೆಂಬ ಸಂಗತಿಯೂ ಗೊತ್ತಿತ್ತು. ಅವನಿಗೆ ಆಶ್ರಯ ಕೊಟ್ಟ ವಿಷಯ ಪೊಲೀಸರಿಗೆ